ಇ) ಆ ವಿಭಾಗದಲ್ಲಿ ತಾತ್ಕಾಲಿಕ ನೆಲೆಯಲ್ಲಿ ನೇಮಕ ಮಾಡಿದ ಚಾಲಕರೆಷ್ಟು ಮತ್ತು ನಿರ್ವಾಹಕರೆಷ್ಟು.

ಈ) ಅವರನ್ನೆಲ್ಲಾ ಖಾಯಂ ಮಾಡಲಾಗುವುದೆ?

ಉ) ಸಿಬ್ಬಂದಿಗಳ ಕೊರತೆ ಎಂಬ ಕಾರಣದಿಂದಾಗಿ ಅಲ್ಲಿನ ದಿನ ನಿತ್ಯದ ಸಾರಿಗೆ ವ್ಯವಸ್ಥೆಗೆ ತೊಂದರೆಯಾಗದಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಭೀಮಣ್ಣಖಂಡ್ರೆ (ಸಾರಿಗೆ ಸಚಿವರು) :

ಅ) ತಾಂತ್ರಿಕ ಸಿಬ್ಬಂದಿ : 168
ಇತರೆ ಸಿಬ್ಬಂದಿ : 153
ಒಟ್ಟು : 321

ಆ) ನೇಮಕಾತಿ ಸಮಿತಿಯನ್ನು ರಚಿಸಲು ಪರಿಶೀಲಿಸಲಾಗುತ್ತಿದೆ. ಅದಾದಕೂಡಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗುವುದು.

ಇ) 180 ಚಾಲಕರು ಮತ್ತು 178 ನಿರ್ವಾಹಕರುಗಳು

ಈ) ಪ್ರಸ್ತುತ ನಿಯಮಾವಳಿಯಂತೆ ಕ್ರಮಕೈಗೊಳ್ಳಲಾಗುವುದು.

ಉ) ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಹರಿಸು ಕಾರ್ಡ್‌ಗಳ ಸಂಖ್ಯೆ.

55 - ಶ್ರೀ ಡಿ.ಬಿ.ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿತರಿಸಿದ್ದ ಒಟ್ಟು ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು?

ಆ) ಅವುಗಳನ್ನು ಪರಿಷ್ಕರಿಸಲಾಗಿದೆಯೇ?

ಇ) ಹಾಗೆ ಪರಿಷ್ಕರಿಸಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಈ) ಈ ಹಸಿರು ಕಾರ್ಡಿಗೆ ಬದಲಾಗಿ ಗುರುತಿಸಿರುವ ಮತ್ತು ವಿತರಿಸಿರುವ ಬದಲಾದ ಕಾರ್ಡುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) 46.85 ಲಕ್ಷಗಳು

ಆ) ಹೌದು

ಇ) ಹಸಿರು ವರ್ಣದ ಪಡಿತರ ಚೀಟಿಗಳನ್ನು ಹೊಂದಲು ನಿಗದಿಪಡಿಸಿದ ವಾರ್ಷಿಕ ಆದಾಯದ ಮಿತಿಯನ್ನು ರೂ. 3500 ರಿಂದ ರೂ. 6400 ಕ್ಕೆ ಹೆಚ್ಚಿಸಲಾಗಿರುವುದರಿಂದ ಅಲ್ಲದೆ ಬಿಟ್ಟು ಹೋದ ಅರ್ಹ ಫಲಾನುಭವಿಗಳಿಗೆ ಈ ಸೌಲಭ್ಯ ದೊರಕಲಿ ಎಂಬ ಉದ್ದೇಶವು ಈ ಪರಿಷ್ಕರಣೆಗೆ ಕಾರಣವಾಗಿತ್ತು.

ಈ) ಗುರುತಿಸಲ್ಪಟ್ಟ ಕುಟುಂಬಗಳು : 51.62 ಲಕ್ಷ ವಿತರಿಸಿರುವ ಪಡಿತರ ಚೀಟಿಗಳು : 46.85 ಲಕ್ಷ (ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ)

Statement of Tri-colour Cards Identified During the Survey And Actually Distributed And Balance To be Distributed.

Sl.No.	District	Identified in the survey	Actually distributed	Balance to be distributed
1.	Bangalore IR	35,487	35.487	-
2.	Bangalore (Urban)	1,38,750	1,06,427	32,323
3.	Bangalore (Rural)	2,86 ,655	2,86,655	-
4.	Belgaum	3,61,367	3,17,176	34,191
5.	Bellary	2,22,649	2,22,649	-
6.	Bidar	1,79,654	1,68,244	11,410
7.	Bijapura	3,58,500	3,47,427	11,071
8.	Chickamagalore	1,69,550	1,69,550	-
9.	Chitradurga	2,95,051	2,95,051	-
10.	Dakshina Kannada	1,76,26	1,76,726	-
11.	Dharwar	3,77,997	3,77,997	-
12.	Gulbarga	3,54,217	3,15,003	39,214
13.	Hassan	2,02,539	2,02,539	-
14.	Coorg	74,747	74,747	-
15.	Kolar	2,48,450	2,48,450	-
16.	Mandya	2,00,243	1,60,243	40,000
17.	Mysore	4,58,549	3,61,651	98,898
18.	Raichur	2,97,995	2,85,995	12,000
19.	Shimoga	2,65,232	1,60,508	1,04,724
20.	Tumkur	3,25,262	2,31,809	93,453
21.	Uthara Kannada	1,41,007	1,41,007	-
	ToTal	**51,62,627**	**46,85343**	**4,77,284**

ಬೆಂಗಳೂರು ನಗರದಲ್ಲಿ ಸಂಚಾರಿ ವಿಭಾಗದ ಪೋಲೀಸರನ್ನು ಹೆಚ್ಚಿಸುವ ಬಗ್ಗೆ

56 ಎ - ಶ್ರೀ ಆರ್.ವಿ.ದೇವರಾಜ್ (ಚಾಮರಾಜಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸಂಚಾರಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಈಗಿರತಕ್ಕ ಸಂಚಾರಿ ಪೊಲೀಸ್ ಸಿಬ್ಬಂದಿಯಿಂದ ಬೆಂಗಳೂರು ನಗರದ ಸಂಚಾರವನ್ನು ನಿಯಂತ್ರಣಗೊಳಿಸಲು ಸಾಧ್ಯವಾಗಿರುವುದೇ?